**ಸಾಕ್ಷಿಗೆ ದಿನಾಂಕ:19-02-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀ.AA ವಕೀಲರಿಂದ ::**

ಪ್ರಸ್ತುತ ದಾವೆಯನ್ನು ದಾವಾ ಆಸ್ತಿ ನಾವು ಖರೀದಿಸಿದ ನಂತರ ದುರಸ್ತಿ ಆಗಿರುವುದಿಲ್ಲ ಮತ್ತು ನಮ್ಮ ಹೆಸರಿಗೆ ಖಾತಾ ಬದಲಾವಣೆ ಆಗಿರುವುದಿಲ್ಲ ಎನ್ನುವ ಕಾರಣದಿಂದ ಹಾಕಿರುತ್ತೇನೆ. ದಾವಾ ಆಸ್ತಿಯು ಹಿಂದೆ 1 ನೇ ಪ್ರತಿವಾದಿಗೆ ಸೇರಿದ್ದು, ಅದು ಅವರಿಗೆ ಅವರ ತಂದೆ ಮಾಡಿಟ್ಟಿದ್ದ ಮರಣ ಶಾಸನ ಪತ್ರದ ಮುಖಾಂತರ ಬಂದಿರುತ್ತದೆ. 1 ನೇ ಪ್ರತಿವಾದಿಯ ತಂದೆಯ ಹೆಸರು ದಸ್ತಗಿರ್ ಸಾಬ್ ಆಗಿರುತ್ತದೆ. ನಿಪಿ1 ಕ್ರಯ ಕರಾರುಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ನಾನು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪಹಣಿ, ಮ್ಯೂಟೇಷನ್ ರಿಜಿಸ್ಟರ್ ಹಾಗೂ ಇಸಿ ಗಳನ್ನು ಪರಿಶೀಲನೆ ಮಾಡಿರುತ್ತೇನೆ. ಕ್ರಯ ಕರಾರು ಪತ್ರ ಆಗುವ ಪೂರ್ವದಲ್ಲಿ ದಾವಾ ಆಸ್ತಿಯ ವ್ಯವಹಾರದ ಬಗ್ಗೆ ನನ್ನ ಹಾಗೂ ಪ್ರತಿವಾದಿಗಳ ನಡುವೆ ನಮ್ಮ ಮನೆಯಲ್ಲೇ ಜನವರಿ 2013 ರಲ್ಲಿ ಮಾತುಕತೆ ಆಗಿರುತ್ತದೆ. ಸದರಿ ಮಾತುಕತೆ ಆಗುವ ಸಮಯದಲ್ಲಿ ನಾನು, ನನ್ನ ಗಂಡ, 1 ನೇ ಪ್ರತಿವಾದಿ, ಅವರ ಹೆಂಡತಿ ಹಾಗೂ ಇತರೇ ಇಬ್ಬರು ವ್ಯಕ್ತಿಗಳಾದ ಎಂ ಕೆ ಮಂಜುನಾಥ ಮತ್ತು ಮೊಹಮದ್ ಸಿದ್ದಿಕ್ ಎನ್ನುವವರು ಇದ್ದರು. ಸದರಿ ಮಾತುಕತೆ ಆದ ಸಮಯದಲ್ಲಿ ನಮ್ಮ ನಡುವೆ ಯಾವುದೇ ಬರವಣಿಗೆ ಆಗಿರುವುದಿಲ್ಲ. ನಿಪಿ1 ಕರಾರು ಪತ್ರವನ್ನು ತಯಾರಿಸುವ ಸಮಯದಲ್ಲಿ ನಾನು, 1 ರಿಂದ 5 ನೇ ಪ್ರತಿವಾದಿಗಳು ಹಾಗೂ ಎಂ ಕೆ ಮಂಜುನಾಥ ಮತ್ತು ಮೊಹಮದ್ ಸಿದ್ದಿಕ್ ರವರು ಹಾಜರಿದ್ದು ಅದನ್ನು ತಯಾರು ಮಾಡಲು ಮಾಹಿತಿಯನ್ನು 1 ನೇ ಪ್ರತಿವಾದಿ ಹಾಗೂ ಮೊಹಮದ್ ಸಿದ್ದಿಕ್ ರವರು ಪತ್ರ ಬರಹಗಾರರಾದ ಲಕ್ಷ್ಮೀ ನಾರಾಯಣ್ ರವರಿಗೆ ನೀಡಿರುತ್ತಾರೆ. ಆ ರೀತಿ ಮಾಹಿತಿಯನ್ನು ದಿಃ 04.02.2013 ರಂದು ನೀಡಲಾಗಿರುತ್ತದೆ. ನಿಪಿ1 ಕರಾರು ಪತ್ರವನ್ನು ತಯಾರಿಸುವ ಪೂರ್ವದಲ್ಲಿ ಯಾವುದೇ ಕರಡು ಪ್ರತಿಯನ್ನು ತಯಾರಿಸಿರುವುದಿಲ್ಲ. ನಿಪಿ1 ಕರಾರು ಪತ್ರವು ದಿಃ 04.02.2013 ರಂದು ಮಃ 12.30 ಗಂಟೆಗೆ ನೋಂದಣಿ ಆಗಿರುತ್ತದೆ.

ನಾನು ಪ್ರತಿವಾದಿಗಳಿಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಮುಂಗಡ ಪ್ರತಿಫಲ ಮೊತ್ತವನ್ನು ನೀಡಿರುವುದಾಗಿ ಹೇಳಿದ್ದು ಅದನ್ನು ತೋರಿಸಲು ಇವರೆಗೂ ನ್ಯಾಯಾಲಯಕ್ಕೆ

ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನಿಪಿ1 ಕರಾರುಪತ್ರವನ್ನು ಮಾಡಿಕೊಳ್ಳುವ ದಿನವೇ ಪ್ರತಿವಾದಿಗಳಿಂದ ನನಗೆ ಕ್ರಯ ಪತ್ರವನ್ನು ಬರೆಸಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಮೊದಲಿಗೆ ಸರಿ ಎಂದು ಉತ್ತರಿಸಿದ್ದು, ನಂತರದಲ್ಲಿ ದಾವಾ ಆಸ್ತಿಯು ಇನ್ನು ಸಹ ದುರಸ್ತಿ ಆಗದಿರುವ ಕಾರಣ ಕ್ರಯ ಪತ್ರವನ್ನು ಮಾಡಿಸಿಕೊಳ್ಳಲು ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ1 ಕ್ರಯ ಕರಾರು ಪತ್ರ ಆದ ನಂತರದಲ್ಲಿ ಪ್ರತಿವಾದಿಗಳಿಗೆ ಅವರ ಆಸ್ತಿಯನ್ನು ದುರಸ್ತಿ ಮಾಡಿಕೊಡುವಂತೆ ಕೋರಿ ಯಾವುದೇ ನೋಟೀಸ್ ನೀಡಿರುವುದಿಲ್ಲ, ಆದರೆ ಅವರನ್ನು ಹಲವಾರು ಬಾರಿ ಭೇಟಿಯಾಗಿ ಕೇಳಿರುತ್ತೇನೆ. ಆ ರೀತಿ ಯಾವ ದಿನಾಂಕಗಳಂದು ಪ್ರತಿವಾದಿಗಳನ್ನು ಭೇಟಿಯಾಗಿ ಕೇಳಿರುತ್ತೇನೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು 06.02.2014 ರಂದು ನಾನು ಪ್ರತಿವಾದಿಗಳನ್ನು ಭೇಟಿಯಾಗಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ಸಮಯದಲ್ಲಿ ನನ್ನನ್ನು ಹಾಗೂ 1 ನೇ ಪ್ರತಿವಾದಿಯನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. 06.02.2014 ಯಾವ ವಾರ ಬರುತ್ತದೆ ಎಂದು ನನಗೆ ಈ ನೆನಪಿಲ್ಲ. ಸದರಿ ದಿನಾಂಕವನ್ನು ಇದೇ ಮೊದಲ ಬಾರಿಗೆ ಸೃಷ್ಟಿ ಮಾಡಿ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಾನು ಹೇಳುವಂತೆ ಪ್ರತಿವಾದಿಗಳಿಗೆ 1 ಲಕ್ಷ 8 ಸಾವಿರ ರೂಪಾಯಿ ಯಾವತ್ತು ಸಹ ಸಂದಾಯ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ ಮೊತ್ತದ ಬಗ್ಗೆ ನಾನು ನ್ಯಾಯಾಲಯದಲ್ಲಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಸದರಿ ಮೊತ್ತವನ್ನು ನಿಪಿ1 ಕ್ರಯ ಕರಾರುಪತ್ರದಲ್ಲಿ ನಮೂದು ಸಹ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಿಪಿ1 ರ 1 ನೇ ಪುಟದ ಹಿಂದಿನ ಪುಟದಲ್ಲಿ ಮೊತ್ತ ಬರೆಯ ಬೇಕಾದ ಜಾಗವು ಖಾಲಿಯಾಗಿರುತ್ತದೆ ಎಂದರೆ ಸರಿ.

**(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: